ಮಾಡುತ್ತಿದ್ದೇವೆ. ಉದಾಹರಣೆಗೆ ಬೇಸಿಕ್ ಅಮೆನಿಟೀಸ್ ಏನು ಇವೆ ಆ ಬೇಸಿಕ್ ಅಮೆನಿಟೀಸ್ ತಾಲ್ಲೂಕು ಮಟ್ಟದಲ್ಲಿ ಇಂತಿಷ್ಟು ಎಂದು ಮಾಡಬೇಕಾಗುತ್ತದೆ. ಯಾವ ತಾಲ್ಲೂಕು ಮಟ್ಟದಲ್ಲಿ ಬೇಸಿಕ್ ಅಮೆನಿಟೀಸ್ ಎಷ್ಟರಮಟ್ಟಿಗೆ ಇದೆ ಅದನ್ನು ನೋಡಿಕೊಂಡು ಅದನ್ನು ಗಮನದಲ್ಲಿಟ್ಟುಕೊಂಡು ಸಮತೋಲನವಾದ ದೃಷ್ಟಿಯಿಂದ ನಾವು ಹೆಜ್ಜೆ ಇಡಬೇಕಾಗುತ್ತದೆ. ಈಗಾಗಲೇ ಒಂದು ಪ್ರಿಫಾರ್ಮ್ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ತಾಲ್ಲೂಕು ಮಟ್ಟಕ್ಕೆ ಕೆಲವು ಬೇಸಿಕ್ ಅಮೆನಿಟೀಸ್ ಎಂದರೆ ಎಂಪ್ಲಾಯ್‌ಮೆಂಟ್ ದೃಷ್ಟಿಯಿಂದ ಅಲ್ಲಿ ಕಷ್ಟದ ಪರಿಸ್ಥಿತಿ ಏನು ಇದೆ ಅದನ್ನು ತಿಳಿದುಕೊಂಡು ಸರಿಮಾಡಬೇಕು. ಅದೇ ರೀತಿ ಬೇಸಿಕ್ ಅಮೆನಿಟೀಸ್ ಇರಿಗೇಷನ್ ಬಗ್ಗೆ ಎಷ್ಟಿದೆ. ಅದನ್ನು ಎಷ್ಟರಮಟ್ಟಿಗೆ ಜಾಸ್ತಿಮಾಡಬೇಕು ಮತ್ತು ಪವರ್ ಎಷ್ಟಿದೆ ಅದನ್ನು ಎಷ್ಟರಮಟ್ಟಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಬೇಕು ಎಂಬ ವಿಷಯಗಳು ಇವೆ. ಇದೆಲ್ಲಾ ಹಣಕಾಸಿನ ಮೇಲೆ ಅವಲಂಬನೆ ಆಗುತ್ತದೆ.

ಎಂಪ್ಲಾಯ್‌ಮೆಂಟ್ ಎಂದರೆ ಸಾಮಾನ್ಯವಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಡೆ ನೋಡುತ್ತಾರೆ. ಅದು ಒಂದು ಕಡೆ. ಇಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಎಂದರೆ ಬೇರೆ ಬೇರೆ ತರಹ ಅನ್ ಎಂಪ್ಲಾಯ್‌ಮೆಂಟ್ ಇರುತ್ತದೆ, ಅನ್‌ಎಂಪ್ಲಾಯ್‌ಮೆಂಟ್ ಎಂದರೆ ಒಂದೇ ರೀತಿ ಇಲ್ಲ. ಈಗ ಕ್ಷಾಮ ಪರಿಸ್ಥಿತಿ ಇರುವ ಕಡೆ ಜನಗಳಿಗೆ ಕೆಲಸ ಇಲ್ಲ. ಅದೂ ಒಂದು ರೀತಿ ಅನ್ ಎಂಪ್ಲಾಯ್‌ಮೆಂಟ್. ಕ್ಷಾಮ ಇರುವ ಕಡೆ ಅದನ್ನು ತಪ್ಪಿಗಟ್ಟಲಿಕ್ಕೆ, ಅದನ್ನು ಸರಿಪಡಿಸುವ ದೃಷ್ಟಿಯಿಂದ ಸಾಕಷ್ಟು ಕೆಲಸವನ್ನು ಎಷ್ಟು ಕೊಡಬೇಕಾಗುತ್ತದೆ ಎಂದು ನೋಡಬೇಕಾಗುತ್ತದೆ. ಇದು ಒಂದು ತರಹ. ಟೆಕ್ನಿಕಲ್ ಅನ್‌ಎಂಪ್ಲಾಯ್‌ಮೆಂಟ್ ಒಂದು ತರಹ. ಸಾಯಿಲ್ ಕನ್‌ಸರ್ವೇಷನ್‌ಗೊಸ್ಕರ ಎಕ್ಸ್‌ಪ್ಲೋಜನ ಡಿಪ್ಲೊಮಾ ಹೋಲ್ಡರ್ಸ್ ಬೇಕು, 200—250 ರೂಪಾಯಿ ಕೊಡುತ್ತೇವೆಂದರೂ ಕೂಡ ಸಾಕಷ್ಟು ಜನ ಸಕಾಲಕ್ಕೆ ಸಿಕ್ಕಲಿಲ್ಲ. ಅದರ ಜೊತೆಗೆ ಎಜ್ಯುಕೇಟೆಡ್ ಅನ್ ಎಂಪ್ಲಾಯ್ಡ್ ಇದ್ದಾರೆ. ಇದನ್ನು ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಾನು ಯೋಚನೆ ಮಾಡುತ್ತಿದ್ದೇನೆ. ಅನ್ ಎಂಪ್ಲಾಯ್‌ಮೆಂಟ್ ಎಂದರೆ ಅದು ಯಾವ ಯಾವ ತರಹ ಅನ್ ಎಂಪ್ಲಾಯ್‌ಮೆಂಟ್ ? ತಾಲ್ಲೂಕು ಮಟ್ಟದಲ್ಲಿದೆ, ಏನೊಂದು ಚಿತ್ರಪಿದೆ, ಅದಕ್ಕಿಂತ ಸ್ಪಷ್ಟವಾದ ಚಿತ್ರವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆ ನಂತರ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಆಂಥ ಅನ್‌ಎಂಪ್ಲಾಯ್‌ಮೆಂಟನ ನಿವಾರಣೆಗೆ ಮಾಡುವ ಪ್ರಯತ್ನಗಳ ಬಗ್ಗೆ ವಿವರಗಳನ್ನು ಕೊಡಬೇಕಾಗುತ್ತದೆ. ಅದೇ ರೀತಿ ಬೇಸಿಕ್ ಅಮೆನಿಟೀಸ್ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ವಲ್ಪ ಚರ್ಚೆಮಾಡಿ ತಿಳಿದುಕೊಂಡು ಐದನೆಯ ಯೋಜನೆಯಲ್ಲಿ ಅದಕ್ಕೂ ಅವಕಾಶವನ್ನು ಕೆಲ್ಪಿಸಿ ಗ್ರಾಮಾಂತರ ಪ್ರದೇಶಗಳನ್ನು ರಿಯಲಿಸ್ಟಿಕ್ ಆಗಿ ಮಾಡಲಿಕ್ಕೆ ಸಾಧ್ಯ. ಇದೂ ಸರ್ಕಾರಕ್ಕೆ ಗೊತ್ತಿದೆ. ನಮಗೆ ವಿಪಕ್ಷ ಕಾರಾವಕಾಶವಿದೆ. ಈ ಅವಧಿಯಲ್ಲಿ ಆ ದಿಕ್ಕಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಎಂದು ಯೋಚನೆಮಾಡಿ ಆ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ.

Disturbances at the H. M. T. Bangalore

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ) :—11-12-1972ರಲ್ಲಿ ರೂಲ್ 48ರ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದ್ದೆ. ಅದಕ್ಕೆ ಅವಕಾಶ ಸಿಕ್ಕಲಿಲ್ಲ ಹಾಗೆಯೇ ಮೊನ್ನೆ 15ನೇ ತಾರೀಖು ಎಚ್. ಎಂ. ಟಿ. ಯಲ್ಲಿ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಸುಟ್ಟು ಹಾಕಿ ಗಲಭೆ ನಡೆದಿದೆ, ಆ ವಿಚಾರ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅದರ ಬಗ್ಗೆ ಕೂಡ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು :—ಅದನ್ನು ನಾನು ನೋಡುತ್ತೇನೆ.

Reported Scuffle in the Meeting of the BCC on 16-3-1973

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ನಗರಪಿತೃಗಳ ನಡುವೆ ಹೊಡೆದಾಟ, ಪರಸ್ಪರ ಹಲ್ಲೆ, ಮೈಕ್ ನಾಶ– ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಈ ರೀತಿಯ ಅವ್ಯವಸ್ಥೆಗಳು ಆಗುತ್ತಿವೆ. ಕಾಂಗ್ರೆಸ್ ಪಕ್ಷದವರೇ ಅಲ್ಲಿ ಅಡಳಿತ ನಡೆಸುವ ಪಕ್ಷವಾಗಿದ್ದುಕೊಂಡು ಕಾಂಗ್ರೆಸ್ ಸದಸ್ಯರು ಬಾಕಿಯವರ ಮೇಲೆ ಬಿದ್ದು ಹಲ್ಲೆ ಮಾಡುತ್ತಿರುತ್ತಾರೆ. ನನ್ನ ಅನುಭವದಲ್ಲಿ ಹಿಂದೆ...